ಕ್ರ.ಸಂ:ಎ3:ವಿದ್ಯುತ್:ಸಿಆರ್02/2020-21

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಕುದುರೆಮುಖ ವನ್ಯಜೀವಿ ವಿಭಾಗ,
ಕಾರ್ಕಳ, ದಿನಾಂಕ : 30-03-2021,
ಟೆಲಿಫ್ಯಾಕ್ಸ್ : (08258) 298183

ರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕುಂದಾಪುರ ಪ್ರಾದೇಶಿಕ ವಿಭಾಗ,
ಕುಂದಾಪುರ.

ಮಾನ್ಯರೇ,

ವಿಷಯ : Diversion of 1.2411 hectare of forest land in Sy.No.198, 199 & 214 of Hebri village, Ajekar Hobli, Karkala Taluk, Udupi District for laying of 11KV HT express line (AB covered conductor cable) from Hebri MUSS to Varanga passing through Jaravathu Kadu RF and along with PWD road in favour of the Executive Engineer (Ele), O & M Division, Mangalore Electricity Supply Limited (MESCOM), Udupi (Proposal No: FP/KA/TRANS/43222/2019

ಉಲ್ಲೇಖ :
1. ತಮ್ಮ ಕಛೇರಿ ಪತ್ರ ಸಂಖ್ಯೆ : ಡಿಎಂಎನ್/ವಿವ.57/ಎಫ್.ಎಲ್.ಡಿ./2020-21, ದಿನಾಂಕ : 25-02-2021.
2. ವಲಯ ಅರಣ್ಯ ಅಧಿಕಾರಿ, ಸೋಮೇಶ್ವರ ವನ್ಯಜೀವಿ ವಲಯ, ಹೆಬ್ರಿ ಇವರ ಕಛೇರಿ ಪತ್ರ ಸಂಖ್ಯೆ : ಸೋ.ವ.ವ./11 ಕೆ.ವಿ.ಹೆಚ್.ಟಿ./2020-21/638, ದಿನಾಂಕ: 16-03-2021.
3. ಭಾರತ ಸರ್ಕಾರದ ಮಾರ್ಗ ಸೂಚಿ F.No. 7-25/2012-FC Dated 05.05.2014
4. ಭಾರತ ಸರ್ಕಾರದ ಮಾರ್ಗ ಸೂಚಿ F.No. 22-43/2018 IA.II Dated 08.08.2019
5. ಸೋಮೇಶ್ವರ ಅಭಯಾರಣ್ಯದ ಅನುಮೋದಿತ ಪರಿಸರ ಸೂಕ್ಷ್ಮ ವಲಯದ ಭಾರತ ಸರ್ಕಾರದ ಆದೇಶ:28-08-2020.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಪತ್ರದಲ್ಲಿ ಅಪೇಕ್ಷಿಸಿರುವ ಪ್ರಸ್ತಾಪಿತ ಹೆಬ್ರಿ ಗ್ರಾಮದ ಮುಸ್ಸೆಯಿಂದ ವರಂಗದವರೆಗೆ 11 ಕೆ.ವಿ. ಹೆಚ್.ಟಿ. ಎಕ್ಸ್‌ಪ್ರೆಸ್ ವಿದ್ಯುತ್ ಮಾರ್ಗ ರಚನೆ ಕುರಿತು ತಾವು ಅಪೇಕ್ಷಿಸಿದ ಮಾಹಿತಿಯ ಕುರಿತು ಉಲ್ಲೇಖ (2)ರಲ್ಲಿ ವಲಯ ಅರಣ್ಯ ಅಧಿಕಾರಿ, ಸೋಮೇಶ್ವರ ವನ್ಯಜೀವಿ ವಲಯ, ಹೆಬ್ರಿ ಇವರು ಸಲ್ಲಿಸಿರುವ ಖಂಡಿಕೆವಾರು ವಿವರಗಳು ಸ್ವ ವಿವರಣಾತ್ಮಕವಾಗಿದೆ. ಸದ್ರಿ ಪತ್ರದ ಪ್ರತಿಯನ್ನು ಈ ಪತ್ರದೊಂದಿಗೆ ಅಡಕಗೊಳಿಸಿ ಕಳುಹಿಸಿದೆ. ಪ್ರಸ್ತಾಪಿತ ವಿದ್ಯುತ್ ಮಾರ್ಗವು ಅಭಯಾರಣ್ಯದ ವ್ಯಾಪ್ತಿಯಲ್ಲಿ ಮತ್ತು ಅನುಮೋದಿತ ಪರಿಸರ ಸೂಕ್ಷ್ಮ ವಲಯದಲ್ಲಿಯೂ ಕೂಡ ಇರುವುದಿಲ್ಲ.

ಯೋಜನೆಗೆ ಉದ್ದೇಶಿಸಿದ ಪ್ರದೇಶವು ಕುಂದಾಪುರ ಪ್ರಾದೇಶಿಕ ವಿಭಾಗದ ವ್ಯಾಪ್ತಿಯಲ್ಲಿ ಇರುತ್ತದೆ. ಹಾಗೂ ಪ್ರಾದೇಶಿಕ ವಿಭಾಗದ ಅಧಿಕಾರಿಗಳೂ ಕೂಡ ವನ್ಯಜೀವಿ ಪರಿಪಾಲಕರಾಗಿರುತ್ತಾರೆ. ಆದುದರಿಂದ ಪ್ರಸ್ತಾಪಿತ ವಿದ್ಯುತ್ ಮಾರ್ಗದಿಂದ ವನ್ಯಜೀವಿಗಳ ಮೇಲೆ ಪರಿಣಾಮ ಉಂಟಾಗುವುದೇ ಎಂಬುದರ ಬಗ್ಗೆ ವಿವರವನ್ನು ತಮ್ಮ ಅಧೀನದ ಅಧಿಕಾರಿಗಳಿಂದ ಪಡೆದು ಸೂಕ್ತ ಕ್ರಮ ಜರುಗಿಸಬಹುದಾಗಿದೆ ಎಂಬ ಮಾಹಿತಿಯನ್ನು ಸಂಪೂರ್ಣ ಕಡತದೊಂದಿಗೆ ಶುಭಾಷಯಗಳೊಂದಿಗೆ ತಮ್ಮ ಅವಗಾಹನೆಗೆ ಕಳುಹಿಸಿದೆ.

ತಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿ
ಕುದುರೆಮುಖ ವನ್ಯಜೀವಿ ವಿಭಾಗ,
ಕಾರ್ಕಳ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ವನ್ಯಜೀವಿ ಉಪ ವಿಭಾಗ, ಸಿದ್ದಾಪುರ

Email:acfwlsiddapura@gmail.com

---

ಕ್ರ.ಸಂ:ಸಅಸಂ:ಸಿಉವಿ:ವಿದ್ಯುತ್/2020-21/41

ದಿನಾಂಕ: 18-03-2021

ರಿಗೆ:

ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಕುದುರೆಮುಖ ವನ್ಯಜೀವಿ ವಿಭಾಗ
ಕಾರ್ಕಳ

ಮಾನ್ಯರೇ

ವಿಷಯ: ಹೆಬ್ರಿ ಮುಸ್ಸಯಿಂದ ವರಂಗದವರೆಗೆ 11 ಕೆ.ವಿ.ಹೆಚ್.ಟಿ ಎಕ್ಸ್‌ಪ್ರೆಸ್ ವಿದ್ಯುತ್ ಮಾರ್ಗದ ರಚನೆ ಬಗ್ಗೆ ಸ್ಥಳ ಪರಿಶೀಲನೆಯ ವರದಿಯನ್ನು ಸಲ್ಲಿಸುವ ಕುರಿತು.

ಉಲ್ಲೇಖ: ವಲಯ ಅರಣ್ಯ ಅಧಿಕಾರಿ, ಸೋಮೇಶ್ವರ ವನ್ಯಜೀವಿ ವಲಯ, ಹೆಬ್ರಿ ಇವರ ಕಛೇರಿ ಪತ್ರ ಸಂಖ್ಯೆ:ಸೋ.ವ.ವ/11 ಕೆ.ವಿ.ಹೆಚ್.ಟಿ/2020-21/638 ದಿನಾಂಕ: 16-03-2021.

************

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯನಿರ್ವಾಹಕ ಇಂಜಿನಿಯರಿಂಗ್ (ವಿ), (ಓ & ಎಂ) ವಿಭಾಗ, ಮೆಸ್ಕಾಂ, ಉಡುಪಿ ಇವರು ಹೆಬ್ರಿ ಮುಸ್ಸಯಿಂದ ವರಂಗದವರೆಗೆ 11 ಕೆ.ವಿ.ಹೆಚ್.ಟಿ ಎಕ್ಸ್‌ಪ್ರೆಸ್ ವಿದ್ಯುತ್ ಮಾರ್ಗ (AB covered conductor cable) ರಚನೆ ಬಗ್ಗೆ ಜರುವತ್ತು ಕಾಡು ಮೀಸಲು ಅರಣ್ಯದ ಕಾರ್ಕಳ ತಾಲೂಕು ಅಜೆಕಾರು ಹೋಬಳಿಯ ಹೆಬ್ರಿ ಗ್ರಾಮದ ಸರ್ವೆ ನಂಬ್ರ 198, 199 ಮತ್ತು 124 ರಲ್ಲಿ 1.2411ಹೆ. ಅರಣ್ಯ ಪ್ರದೇಶವನ್ನು ಅರಣ್ಯ (ಸಂರಕ್ಷಣಾ) ಕಾಯ್ದೆಯಡಿ ಬಿಡುಗಡೆಗೊಳಿಸುವ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆಯ ಕುರಿತಂತೆ ವಲಯ ಅರಣ್ಯ ಅಧಿಕಾರಿ, ಸೋಮೇಶ್ವರ ವನ್ಯಜೀವಿ ವಲಯ, ಹೆಬ್ರಿ ಇವರು ಪರಿಶೀಲನೆ ನಡೆಸಿ, ಸದ್ರಿ ಅರಣ್ಯ ಪ್ರದೇಶವು ಸೋಮೇಶ್ವರ ಅಭಯಾರಣ್ಯದ ಜಟ್‌ಕಟ್‌ಮಲೆ ಮೀಸಲು ಅರಣ್ಯದ ಗಡಿರೇಖೆಯಿಂದ ಅಂದಾಜು 1.4 ಕಿ.ಮೀ ಹಾಗೂ ಪರಿಸರ ಸೂಕ್ಷ್ಮ ವಲಯದ ಗಡಿಯಿಂದ ಅಂದಾಜು 911ಮಿ. ದೂರದಲ್ಲಿರುವುದು ಸ್ಥಳದ ಜಿಪಿಎಸ್ ದತ್ತಾಂಶದಿಂದ ತಿಳಿದುಬಂದಿರುವುದಾಗಿ ಅಭಿಪ್ರಾಯಪಟ್ಟು ಉಲ್ಲೇಖದ ಪತ್ರದಂತೆ ವರದಿಯನ್ನು ಈ ಕಛೇರಿ ಮುಖಾಂತರ ಸಲ್ಲಿಸಿರುತ್ತಾರೆ.

ವಲಯ ಅರಣ್ಯ ಅಧಿಕಾರಿಯವರ ವರದಿಯಂತೆ ಹೆಬ್ರಿ ಮುಸ್ಸಯಿಂದ ವರಂಗದವರೆಗೆ 11 ಕೆ.ವಿ.ಹೆಚ್.ಟಿ ಎಕ್ಸ್‌ಪ್ರೆಸ್ ವಿದ್ಯುತ್ ಮಾರ್ಗ (AB covered conductor cable) ರಚನೆ ಬಗ್ಗೆ ಜರುವತ್ತು ಕಾಡು ಮೀಸಲು ಅರಣ್ಯದ ಕಾರ್ಕಳ ತಾಲೂಕು ಅಜೆಕಾರು ಹೋಬಳಿಯ ಹೆಬ್ರಿ ಗ್ರಾಮದ ಸರ್ವೆ ನಂಬ್ರ 198, 199 ಮತ್ತು 124 ರಲ್ಲಿ 1.2411ಹೆ. ಅರಣ್ಯ ಪ್ರದೇಶವು ಸೋಮೇಶ್ವರ ಅಭಯಾರಣ್ಯದ ಜಟ್‌ಕಟ್‌ಮಲೆ ಮೀಸಲು ಅರಣ್ಯದ ಗಡಿರೇಖೆಯಿಂದ 1.4ಕಿ.ಮೀ ಹಾಗೂ ಪರಿಸರ ಸೂಕ್ಷ್ಮ ವಲಯದ ಗಡಿಯಿಂದ 911ಮೀ. ದೂರದಲ್ಲಿರುವುದರಿಂದ, ಸದ್ರಿ ವಿದ್ಯುತ್ ಮಾರ್ಗ ರಚನೆ ಬಗ್ಗೆ ವಲಯ ಅರಣ್ಯ ಅಧಿಕಾರಿಯವರು ಉಲ್ಲೇಖದ ಪತ್ರದೊಂದಿಗೆ ಸಲ್ಲಿಸಿರುವ ಸಂಪೂರ್ಣ ಕಡತವನ್ನು ವರದಿಯೊಂದಿಗೆ ಸಲ್ಲಿಸಿದೆ.

ತಮ್ಮ ನಂಬುಗೆಯ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ವನ್ಯಜೀವಿ ಉಪ ವಿಭಾಗ
ಸಿದ್ದಾಪುರ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ಕುದುರೆಮುಖ ವನ್ಯಜೀವಿ ವಿಭಾಗ
ಕಾರ್ಕಳ - 574 104, ಉಡುಪಿ ಜಿಲ್ಲೆ
A3 22 MAR 2021 2302
4949
23-3-2021
ನೋಂದಣಿ ಸಂಖ್ಯೆ ಉ.ಅ.ಸಂ.

ವಲಯ ಅರಣ್ಯ ಅಧಿಕಾರಿ ಕಛೇರಿ, ಸೋಮೇಶ್ವರ ವನ್ಯಜೀವಿ ವಲಯ, ಹೆಬ್ರಿ.

ದೂರವಾಣಿ:08253-250005 ಇಮೇಲ್:rfowildlifehebri@yahoo.com

ಕ್ರ.ಸಂ.ಸೋ.ವ.ವ/11 ಕೆ.ವಿ.ಹೆಚ್.ಟಿ/2020-21 | 638 ದಿನಾಂಕ : 16 -03-2021.

ಇವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಕುದುರೆಮುಖ ವನ್ಯಜೀವಿ ವಿಭಾಗ,
ಕಾರ್ಕಳ.

ಮುಖಾಂತರ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು,
ವನ್ಯಜೀವಿ ಉಪ ವಿಭಾಗ,
ಸಿದ್ದಾಪುರ.

ಮಾನ್ಯರೇ,

ವಿಷಯ : ಹೆಬ್ರಿ ಮುಸ್ಸಯಿಂದ ವರಂಗವರೆಗೆ 11 ಕೆ.ವಿ.ಹೆಚ್.ಟಿ ಎಕ್ಸ್‌ಪ್ರೆಸ್ ವಿದ್ಯುತ್ ಮಾರ್ಗದ ರಚನೆ ಬಗ್ಗೆ ಸ್ಥಳ ಪರಿಶೀಲನೆಯ ವರದಿಯನ್ನು ಸಲ್ಲಿಸುವ ಕುರಿತು.

ಉಲ್ಲೇಖ : 1) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ, ಇವರ ಕಛೇರಿ ಪತ್ರ ಕ್ರಸಂ:ಎ3/ಸಿಆರ್/02/2020-21, ದಿನಾಂಕ :01-03-2021.
2) ಉಪ ವಲಯ ಅರಣ್ಯಾಧಿಕಾರಿಗಳು, ಹೆಬ್ರಿ ವನ್ಯಜೀವಿ ಘಟಕ ಇವರ ವರದಿ ದಿನಾಂಕ : 17-03-2021.

ಉಪ ಅರಣ್ಯ ಸಂರಕ್ಷಣಾಧಿಕಾರಿ ವನ್ಯಜೀವಿ ಉಪ ವಿಭಾಗ ... ದಿನಾಂಕ 18/03/20 ಸಂಖ್ಯೆ 848

---

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯ ನಿರ್ವಾಹಕ ಇಂಜಿನಿಯರಿಂಗ್ (ವಿ), (ಓ & ಎಂ) ವಿಭಾಗ, ಮೆಸ್ಕಾಂ, ಉಡುಪಿ ಇವರು ಹೆಬ್ರಿ ಮುಸ್ಸಯಿಂದ ವರಂಗವರೆಗೆ 11 ಕೆ.ವಿ.ಹೆಚ್.ಟಿ ಎಕ್ಸ್‌ಪ್ರೆಸ್ ವಿದ್ಯುತ್ ಮಾರ್ಗ (AB covered conductor cable) ರಚನೆ ಬಗ್ಗೆ ಜರುವತ್ತು ಕಾಡು ಮೀಸಲು ಅರಣ್ಯದ ಕಾರ್ಕಳ ತಾಲೂಕು ಅಜೆಕಾರು ಹೋಬಳಿಯ ಹೆಬ್ರಿ ಗ್ರಾಮದ ಸರ್ವೆನಂಬ್ರ 198, 199 ಮತ್ತು 214ರಲ್ಲಿ 1.2411ಹೆ. ಅರಣ್ಯ ಪ್ರದೇಶವನ್ನು ಅರಣ್ಯ (ಸಂರಕ್ಷಣಾ) ಕಾಯ್ದೆಯಡಿ ಬಿಡುಗಡೆಗೊಳಿಸುವ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆಯಂತೆ, ಉಪ ವಲಯ ಅರಣ್ಯಾಧಿಕಾರಿ ಹೆಬ್ರಿ ವನ್ಯಜೀವಿ ಘಟಕ ಇವರು ಸ್ಥಳ ಪರಿಶೀಲನೆ ನಡೆಸಿ ಸದ್ರಿ ಅರಣ್ಯ ಪ್ರದೇಶವು ಸೋಮೆಶ್ವರ ಅಭಯಾರಣ್ಯದ ಜಟ್‌ಕಟ್‌ಮಲೆ ಮೀಸಲು ಅರಣ್ಯದ ಗಡಿರೇಖೆಯಿಂದ ಅಂದಾಜು 1.4ಕಿ.ಮೀ ಹಾಗೂ ಪರಿಸರ ಸೂಕ್ಷ್ಮ ವಲಯದ ಗಡಿಯಿಂದ ಅಂದಾಜು 911ಮೀ. ದೂರದಲ್ಲಿರುವುದು ಸ್ಥಳದ ಜಿ.ಪಿ.ಎಸ್ ದತ್ತಾಂಶದಿಂದ ತಿಳಿದು ಬಂದಿರುತ್ತದೆ ಎಂಬುದಾಗಿ ಉಲ್ಲೇಖ (2)ರಂತೆ ಈ ಕಛೇರಿಗೆ ವರದಿ ಮಾಡಿರುತ್ತಾರೆ.

ಮುಂದುವರೆದು ಸದ್ರಿ ಹೆಬ್ರಿ ಗ್ರಾಮದ ಸರ್ವೆನಂಬ್ರ 198, 199 ಮತ್ತು 214ರಲ್ಲಿ 1.2411 ಅರಣ್ಯ ಪ್ರದೇಶವು ಸೋಮೆಶ್ವರ ಅಭಯಾರಣ್ಯದ ಜಟ್‌ಕಟ್‌ಮಲೆ ಮೀಸಲು ಅರಣ್ಯದ ಗಡಿರೇಖೆಯಿಂದ ಅಂದಾಜು 1.4ಕಿ.ಮೀ ಹಾಗೂ ಪರಿಸರ ಸೂಕ್ಷ್ಮ ವಲಯದ ಗಡಿಯಿಂದ ಅಂದಾಜು 911ಮೀ. ದೂರದಲ್ಲಿರುವುದು ಸ್ಥಳದ

ಜಿ.ಪಿ.ಎಸ್ ದತ್ತಾಂಶದಿಂದ ತಿಳಿದು ಬಂದಿರುತ್ತದೆ ಎಂಬುದಾಗಿ ಅಭಿಪ್ರಾಯಪಡುತ್ತಾ ಸದ್ರಿ ಸಂಪೂರ್ಣ ಕಡತವನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ. ಹಾಗೂ ಉಲ್ಲೇಖ (1)ರ ಪತ್ರದಲ್ಲಿ ಕೇಳಿರುವ ಮಾಹಿತಿಯನ್ನು Annexure'ನಲ್ಲಿ ಭರ್ತಿಮಾಡಿ ಈ ಪತ್ರದೊಂದಿಗೆ ಲಗತ್ತಿಸಿದೆ.

ತಮ್ಮ ನಂಬುಗೆಯ,

ವಲಯ ಅರಣ್ಯ ಅಧಿಕಾರಿ,
ಸೋಮೇಶ್ವರ ವನ್ಯಜೀವಿ ವಲಯ,
ಹೆಬ್ರಿ.